ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 6, January - February 2025, Pp. 144-154
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಚಾಮರಾಜನಗರ ಜಿಲ್ಲೆಯ ತತ್ತ್ವಪದಗಳ ವೈಶಿಷ್ಟ್ಯಗಳು

**ಮಹಾದೇವಸ್ವಾಮಿ ಎಂ**

ಸಹಾಯಕ ಪ್ರಾಧ್ಯಾಪಕ, ಕನ್ನಡ ವಿಭಾಗ, ಸೇಪಿಯೆಂಟ್ ಕಾಲೇಜು, ಕೆ.ಆರ್.ಎಸ್ ರಸ್ತೆ, ಮೇಟಗಳ್ಳಿ, ಮೈಸೂರು

***Abstract:***

*ತತ್ತ್ವಪದ ಸಾಹಿತ್ಯವು ಕನ್ನಡ ಸಾಹಿತ್ಯ, ಸಂಸ್ಕೃತಿ ಮತ್ತು ಆಧ್ಯಾತ್ಮಿಕ ದೃಷ್ಟಿಯಿಂದ ಗಮನಿಸಲೇಬೇಕಾದ ವಿಶಿಷ್ಟ ಪ್ರಕಾರವಾಗಿದೆ. ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲೂಕಿನ ಚಿಲಕವಾಡಿಯಲ್ಲಿರುವ ಶಂಭುಲಿಂಗನ ಬೆಟ್ಟದಲ್ಲಿ ನೆಲೆಸಿದ್ದ ನಿಜಗುಣ ಶಿವಯೋಗಿಗಳು ತತ್ತ್ವಪದ ಸಾಹಿತ್ಯದ ಪ್ರವರ್ತಕರೆಂದು ತಿಳಿಯಲಾಗಿದೆ. ಹದಿನಾರನೆಯ ಶತಮಾನದಲ್ಲಿ ಜೀವಿಸಿದ್ದ ಇವರ ಸಾಧನೆ ಕರ್ನಾಟಕದ ತತ್ತ್ವಪದ ಸಾಹಿತ್ಯ ಚರಿತ್ರೆಯಲ್ಲಿ ಮುಖ್ಯವಾಗಿ ದಾಖಲಿಸುವ ಕಾಲಘಟ್ಟವಾಗಿದೆ. ಅವರ ಷಟ್‌ಶಾಸ್ತ್ರಗಳಲ್ಲಿ ಕೈವಲ್ಯಪದ್ಧತಿ ಕೃತಿಯು ಕನ್ನಡದ ಮೊದಲ ತತ್ತ್ವಪದಗಳ ಸಂಕಲನ ಎನಿಸಿದೆ. ಕಾಲ ಕಾಲಕ್ಕೆ ಹೊರಹೊಮ್ಮಿದ ತಮ್ಮ ಅಂತರಂಗದ ಅನುಭವ ರೂಪವಾದ ತತ್ತ್ವಪದಗಳನ್ನು ನಿಜಗುಣರು ಇಲ್ಲಿ ಅನುವರಿತು ಅಳವಡಿಸಿದ್ದಾರೆ. ಭಾವನೆಗೆ ಅನುಗುಣವಾದ ರಾಗಗಳಿಂದ ಅವು ಮೂಡಿಬಂದಿರುವುದರಿಂದ ತುಂಬಾ ಪರಿಣಾಮಕಾರಿಯಾಗಿವೆ; ಜನ ಜೀವನದಲ್ಲಿ ಹಾಸುಹೊಕ್ಕಾಗಿವೆ. ಪ್ರಸ್ತುತ ಲೇಖನದಲ್ಲಿ ಚಾಮರಾಜನಗರ ಜಿಲ್ಲೆಯ ತತ್ತ್ವಪದಗಳ ವೈಶಿಷ್ಟ್ಯಗಳನ್ನು ಅಧ್ಯಯನ ಮಾಡಲಾಗಿದೆ.*

**Keywords:** *ಕನ್ನಡ ಸಾಹಿತ್ಯ, ನಿಜಗುಣ ಶಿವಯೋಗಿ, ತತ್ತ್ವಪದಗಳು, ಚಾಮರಾಜನಗರ, ಚಿಲಕವಾಡಿ.*

## ಪೀಠಿಕೆ

ತತ್ತ್ವಪದಗಳು ಸಮಾಜದ ಮುಂದೆ ಉಜ್ವಲ ಆದರ್ಶವನ್ನಿಟ್ಟಿವೆ. ಜನಜೀವನದೊಡನೆ ಬೆರೆತು, ಅವರ ಸಾಂಸ್ಕೃತಿಕ ಜೀವನವನ್ನು ರೂಪುಗೊಳಿಸಿವೆ. ಇವರ ಹಲವಾರು ಪದಗಳು ಜನಸಾಮಾನ್ಯರ ನಿತ್ಯದ ಬದುಕಿನ ಭಾಗವಾಗಿವೆ. ಹದಿನಾರನೆಯ ಶತಮಾನದಿಂದ ಇಂದಿನವರೆಗೆ ಈ ಬಗೆಯ ತತ್ತ್ವಪದಗಳು ವಿಫುಲವಾಗಿ ಬೆಳೆದುಕೊಂಡು ಬಂದಿವೆ. ಶಿಷ್ಟ ಹಾಗೂ ಜನಪದ ಸಾಹಿತ್ಯ ಎರಡೂ ಪರಂಪರೆಗೂ ಸೇರಿರುವ ಇವುಗಳು ಧರ್ಮ ಸಮನ್ವಯ, ಭಾಷಾ ಸಮನ್ವಯ, ಪ್ರಾದೇಶಿಕ ಸಮನ್ವಯಗಳನ್ನು ಸಾಧಿಸಿವೆ. ಅದರೊಂದಿಗೆ ಸಾಹಿತ್ಯ ಸಮನ್ವಯವನ್ನೂ ಸಾಧಿಸಿವೆ. ಗ್ರಾಮೀಣ ಪ್ರದೇಶದ ಸ್ಥಳೀಯ ಸಂತರ, ಗುರುವಿನ ಸನ್ನಿಧಿಯಲ್ಲಿ, ಗದ್ದಿಗೆ, ಗುರುಮಠಗಳ ಹಜಾರದಲ್ಲಿ ಈ ತತ್ತ್ವಪದಗಳು ಚಾಮರಾಜನಗರದ ಎಲ್ಲಾ ಹಳ್ಳಿಗಳಲ್ಲಿ ಗಾಯನ ರೂಪದಲ್ಲಿ ಆಚರಣೆಗೊಳ್ಳುತ್ತವೆ. ಇಂತಹ ಆಚರಣೆಯಲ್ಲಿ ಕೇಳುಗರ ಪ್ರತ್ಯೇಕ ವರ್ಗವಿರುವುದಿಲ್ಲ. ಬದಲಾಗಿ ಎಲ್ಲರ ಭಾಗವಹಿಸುವಿಕೆ, ಪಾಲ್ಗೊಳ್ಳುವಿಕೆ ಇರುತ್ತದೆ. ಹಾಗಾಗಿ ಅಚ್ಚಾದ ತತ್ತ್ವಪದ ಓದಿನಿಂದ ದೊರೆಯಬಹುದಾದ ತಿಳಿವಳಿಕೆ ಕೇವಲ ಆಂಶಿಕವಾದದ್ದು. ತತ್ತ್ವಪದದ ಆಚರಣೆಯಲ್ಲಿ ಭಾಗವಹಿಸಿ ಪಡೆಯುವ ಅನುಭವ ತೀರ

***Please cite this article as:*** ಮಹಾದೇವಸ್ವಾಮಿ, ಎಂ. (2025). ಚಾಮರಾಜನಗರ ಜಿಲ್ಲೆಯ ತತ್ತ್ವಪದಗಳ ವೈಶಿಷ್ಟ್ಯಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವಲಪ್‌ಮೆಂಟ್,* 3(6), 144–154

ಬೇರೆಯದ್ದೇ ರೀತಿಯದ್ದಾಗಿದೆ. ತತ್ತ್ವಪದಗಳ ಆಚರಣೆ "ಎಲ್ಲಾ ಭಾಗಗಳಿಗೆ ತಮ್ಮ ಬದುಕಿನ ವಿವರಗಳ ಮೂಲಕ ಬೇರೊಂದು ಬೆಳಕನ್ನು ಕಾಣುವ; ಬೇರೊಂದು ಬೆಳಕಿನ ಮೂಲಕ ತಮ್ಮ ದೈನಿಕ ವಿವರಗಳನ್ನು ನೋಡುವ; ಇಹ–ಪರದ ದ್ವಂದ್ವಗಳನ್ನು ದಾಟಿದ ಅವಕಾಶವನ್ನು ಒದಗಿಸಿಕೊಡುತ್ತವೆ. ಇಲ್ಲಿ ದುಡಿಮೆಯ ನಂತರದ ಪುರುಸೊತ್ತನ್ನು ರಂಜಕಗೊಳಿಸುವ ಮನರಂಜನೆ, ದಣಿವನ್ನು ಹಗುರಾಗಿಸುವ ಹಾಸ್ಯ, ಮುದುಡಿದ ಮನಸ್ಸನ್ನು ತೆರೆಸುವ ಅರಿವುಗಾಣುವಿಕೆ, ಎಲ್ಲವೂ ಮೇಳೈಸಿದೆ. ತತ್ತ್ವಪದದ ಸಂಸ್ಕೃತಿ ಹಲವು ಸಾಮಾಜಿಕ ನಿಯೋಗಗಳನ್ನು ನೆರವೇರಿಸುವ ಬಗೆಯದು"[1] ಎಂಬ ಎಚ್.ಎಸ್.ಶಿವಪ್ರಕಾಶ್ ಅವರ ಅಭಿಪ್ರಾಯ ಸೂಕ್ತವಾದುದಾಗಿದೆ.

ಚಾಮರಾಜನಗರ ಪ್ರದೇಶದಲ್ಲಿರುವ ತತ್ತ್ವಪದಗಳ ವೈಶಿಷ್ಟ್ಯವನ್ನು ಗುರುತಿಸುವಾಗ ಎರಡು ಬಗೆಯ ಭಿತ್ತಿಗಳನ್ನು ಗಮನಿಸಬೇಕಾಗುತ್ತದೆ. ಒಂದು ಈ ಭಾಗದ ಅನುಭಾವಿಯ ಜೀವನದಲ್ಲಿ ಸಂಭವಿಸಿದ ಘಟನೆಗಳ ಹಿನ್ನೆಲೆಯ ಭಿತ್ತಿ. ಮತ್ತೊಂದು ತಮಗಿಂತ ಹಿಂದಿನ ಕಾಲದ ಅಥವಾ ಸಮಕಾಲೀನ ಅನುಭಾವಿಗಳ ರಚನೆಗಳ ಮತ್ತು ಘಟನೆಗಳ ಭಿತ್ತಿ. ಹಾಗೆಯೇ ಇತರರ ತತ್ತ್ವಪದಗಳ ರಚನೆಗಳು ವಿಚಿತ್ರವಾದ ಕರ್ತೃತ್ವದ ಸಮಸ್ಯೆಗಳನ್ನು ಹುಟ್ಟುಹಾಕುತ್ತವೆ. ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ರಚನೆಗೊಂಡಿರುವ ಅನೇಕ ತತ್ತ್ವಪದಗಳು ಅಲ್ಪಸ್ವಲ್ಪ ಬದಲಾವಣೆಗಳೊಂದಿಗೆ ಈ ನೆಲದಲ್ಲಿ ಉಳಿದು ಬಂದಿವೆ. ಸಂಪೂರ್ಣವಾಗಿ ಇಲ್ಲಿಯ ರಚನೆ ಎನ್ನುವಷ್ಟರ ಮಟ್ಟಿಗೆ ಒಗ್ಗಿಕೊಂಡಿವೆ. ಇಲ್ಲಿಯ ಜನ ಈ ತತ್ತ್ವಪದಗಳನ್ನು ತಮ್ಮ ಬದುಕಿನ ಭಾಗವಾಗಿ ಒಪ್ಪಿರುವವರಾಗಿದ್ದಾರೆ. ಹಾಗಾಗಿ ಅನೇಕ ಪಠ್ಯಗಳನ್ನೊಳಗೊಂಡಿರುವ ಸಂಕೀರ್ಣ ಪಠ್ಯಗಳಾಗಿರುವ ತತ್ತ್ವಪದಗಳ ಕರ್ತೃತ್ವದ ಪ್ರಶ್ನೆಗೆ ಇವರು ತಲೆ ಕೆಡಿಸಿಕೊಳ್ಳುವುದಿಲ್ಲ. ಅದರ ಬದಲು ಆ ಪದ ಹೇಳುವ ಸಂಗತಿಗೆ ಬೆಲೆಕೊಡುತ್ತಾರೆ. ಆದ್ದರಿಂದಲೇ ತತ್ತ್ವಪದಗಳು ಇಂದಿಗೂ ಈ ನೆಲದ ಸಂಸ್ಕೃತಿಯಲ್ಲಿ ಉಳಿದುಬಂದಿವೆ. ಇದಕ್ಕೆ ಮುಖ್ಯ ಕಾರಣ ಇವು ಸಾಂಸ್ಥಿಕ ರೂಪವನ್ನು ಪಡೆಯದಿರುವುದೇ ಆಗಿದೆ.

ಪ್ರಸ್ತುತ ಲೇಖನದಲ್ಲಿ ಚಾಮರಾಜನಗರ ಪ್ರದೇಶದಲ್ಲಿ ರಚನೆಗೊಂಡು ಆಚರಣೆಯಲ್ಲಿರುವ ತತ್ತ್ವಪದಗಳು ಮತ್ತು ಜೊತೆಗೆ ಇಲ್ಲಿ ಹಾಡಲ್ಪಡುತ್ತಿರುವ ಕರ್ನಾಟಕದ ಇತರ ಭಾಗದ ತತ್ತ್ವಪದಕಾರರ ರಚನೆಗಳ ವೈಶಿಷ್ಟ್ಯಗಳನ್ನು ಗುರುತಿಸಲಾಗಿದೆ. ಹಾಗೂ ಸಾಮಾಜಿಕ, ಆಧ್ಯಾತ್ಮಿಕ, ಆಚರಣಾತ್ಮಕ ಮತ್ತು ಸಾಹಿತ್ಯಿಕ ನೆಲೆಗಳ ವೈಶಿಷ್ಟ್ಯಗಳನ್ನೂ ವಿವರಿಸಲಾಗಿದೆ.

ಪ್ರಪಂಚದಲ್ಲಿಯೇ ಅತೀ ಹೆಚ್ಚು ಧರ್ಮಗಳನ್ನು ಅನುಸರಿಸುತ್ತಿರುವ ದೇಶ ನಮ್ಮದು. ಹಾಗಾಗಿ ಈ ನೆಲದಲ್ಲಿ ಹಲವು ಭಾಷೆ, ಸಂಪ್ರದಾಯ, ನಂಬಿಕೆ, ಜೀವನ ಶೈಲಿ ಹಾಗೂ ಸಾಂಸ್ಕೃತಿಕ ನೆಲೆಗಳನ್ನು ಕಾಣಬಹುದಾಗಿದೆ. ವಿವಿಧತೆಯಲ್ಲಿ ಏಕತೆಯನ್ನು ಸಾಧಿಸಿರುವುದು ಭಾರತೀಯ ನೆಲದ ಮತ್ತೊಂದು ವೈಶಿಷ್ಟ್ಯವಾಗಿದೆ. ಅಂತೆಯೇ ಮಧ್ಯಕಾಲೀನ ಕಾಲಘಟ್ಟದಲ್ಲಿ ಭಾರತದಾದ್ಯಂತ ಅನೇಕ ಭಕ್ತಿ ಚಳವಳಿಗಳು ನಡೆದಿರುವುದನ್ನು ಗುರುತಿಸಬಹುದಾಗಿದೆ. ಈ ಚಳವಳಿಗಳು ಆತ್ಮ ಮತ್ತು ಪರಮಾತ್ಮನ ನಡುವಿನ ಅನುಸಂಧಾನವನ್ನೇ ಪ್ರಮುಖ ನೆಲೆಯನ್ನಾಗಿ ಹೊಂದಿದ್ದವು. ಆದರೂ ಜನಸಾಮಾನ್ಯರಿಗೆ ನೈತಿಕ ಮಾರ್ಗದರ್ಶನವನ್ನು ನೀಡಿ ಅವರಲ್ಲಿ ಆತ್ಮಸ್ಥೈರ್ಯವನ್ನು ತುಂಬುವ ಕೆಲಸವನ್ನು ಇವು ನಿರ್ವಹಿಸಿವೆ. ಕ್ರಿ.ಶ.7ನೇ ಶತಮಾನದಲ್ಲಿ ದಕ್ಷಿಣ ಭಾರತದ ಅನೇಕ ಕಡೆಗಳಲ್ಲಿ ಹುಟ್ಟಿಕೊಂಡ ಆಳ್ವಾರ್ ಮತ್ತು ನಾಯನಾರ್ ಚಳವಳಿಗಳು, ಕ್ರಿ.ಶ.12ನೇ ಶತಮಾನದ ವೇಳೆಗೆ ಕರ್ನಾಟಕದಲ್ಲಿ ಹುಟ್ಟು ಪಡೆದ ಶರಣ ಚಳವಳಿ, ಕ್ರಿ.ಶ.16ನೇ ಶತಮಾನದಲ್ಲಿ ಹರಿದಾಸ ಚಳವಳಿ, ಪೂರ್ವ ಭಾರತದಲ್ಲಿನ ಚೈತನ್ಯ ಪಂಥೀಯರ ಚೈತನ್ಯ ಚಳವಳಿ, ಪಂಜಾಬಿನ ಸಿಖ್ ಪಂಥೀಯ ಚಳವಳಿ,

ಗುಜರಾತ್ ಮತ್ತು ರಾಜಸ್ಥಾನಗಳಲ್ಲಿ ವೈಷ್ಣವ ಪಂಥದ ಚಳವಳಿ, ಮೀರಾಬಾಯಿ ಮತ್ತು ನರಸಿಂಹ ಮೆಹ್ತಾರ ಚಳವಳಿ ಇತ್ಯಾದಿ. ಹೀಗೆ ಭಾರತದಾದ್ಯಂತ ಅನೇಕ ಧಾರ್ಮಿಕ ಚಳವಳಿಗಳು ನಡೆದು ಹೋಗಿವೆ.

ಕನ್ನಡ ನೆಲದಲ್ಲಿ ವಚನಸಾಹಿತ್ಯ, ಸೂಫಿಸಾಹಿತ್ಯ, ದಾಸಸಾಹಿತ್ಯ ಮೊದಲಾದವುಗಳೊಂದಿಗೆ ತನ್ನದೇ ವಿಶೇಷತೆಗಳನ್ನು ಮೈಗೂಡಿಸಿಕೊಂಡು ತತ್ತ್ವಪದಗಳು ಹುಟ್ಟುಪಡೆದಿವೆ. ತತ್ತ್ವಪದ ಸಾಹಿತ್ಯ 16ನೇ ಶತಮಾನದಲ್ಲಿದ್ದ ನಿಜಗುಣರಿಂದ ಶಿಷ್ಟ ಸಾಹಿತ್ಯ ರೂಪದಲ್ಲಿ ಆರಂಭವಾಯಿತು. ಎಂಬುದನ್ನು ಈಗಾಗಲೇ ತಿಳಿಯಲಾಗಿದೆ. ಇದು 17ನೇ ಶತಮಾನದ ಹೊತ್ತಿಗೆ ಜನಪದ ಸಂವೇದನೆಯಿಂದ ರೂಪುಗೊಂಡಿತು. ಆ ಮೂಲಕ ಸಾಮಾಜಿಕ ಆಯಾಮವನ್ನು ಪಡೆದುಕೊಂಡಿತು. ಸರಳವಾದ ಭಾಷೆಯಲ್ಲಿ ಆಧ್ಯಾತ್ಮಿಕ ತತ್ತ್ವಗಳನ್ನು ಪ್ರಸಾರ ಮಾಡಿತು. ಬದುಕಿನ ಶ್ರೇಷ್ಠತೆಯನ್ನು ನಿರಂತರವಾಗಿ ಧ್ಯಾನಿಸುತ್ತಾ, ಜಾತ್ಯತೀತವೂ, ಮಾನವೀಯವೂ ಆದ ಮೌಲ್ಯಗಳಿಗಾಗಿ ಎಲ್ಲಾ ಕಾಲದಲ್ಲೂ ಹಂಬಲಿಸಿತು. ಸಮಾಜದಲ್ಲಿನ ಮನುಷ್ಯನ ಹುಟ್ಟು–ಸಾವು, ದೇವರು–ಧರ್ಮ, ಜಾತಿ–ಸಂಪ್ರದಾಯ, ಮಡಿ–ಮೈಲಿಗೆ, ಆಚಾರ–ವಿಚಾರ, ಕುಲ ಮುಂತಾದ ವಿಷಯಗಳ ಕುರಿತು ಜನಸಾಮಾನ್ಯರಿಗೆ ನೀತಿ ಬೋಧೆಯನ್ನು ನೀಡಿತು. "ವೈದಿಕ ಪರಂಪರೆಯ ವ್ಯಕ್ತಿ ಕೇಂದ್ರಿತ ಆಧ್ಯಾತ್ಮಿಕ ಚಿಂತನೆಗಳಿಗಿಂತ, ವಿಭಿನ್ನ ನೆಲೆಯಲ್ಲಿನ ಹೆಂಗರುಳಿನ ಈ ಸಾಹಿತ್ಯವು ಆಕಾಶದ ಕೆಳಗಿನ ಸರ್ವಸ್ವವನ್ನು ಸೂಕ್ಷ್ಮವಾಗಿ ಗಮನಿಸಬಲ್ಲ ಜಾನಪದದ ನೆಲೆಗಟ್ಟಿನ ಮೇಲೆ ನಿಂತಿದೆ"[2] ಎಂಬ ಅಭಿಪ್ರಾಯ ಇದಕ್ಕೆ ಸೂಕ್ತ ನಿದರ್ಶನವಾಗಿದೆ. ಇದು ಎಲ್ಲರ ಬದುಕಿಗೂ ಒಳ್ಳೆಯದನ್ನೇ ಬಯಸುವ ಬೌದ್ಧದರ್ಶನದ ತೆರೆದ ಮನಸ್ಸಿನ ಆಶಯಗಳನ್ನು ಒಳಗೊಂಡಿದೆ. ಸೂಫಿ ಪರಂಪರೆಯಲ್ಲಿರುವ ಸಹಬಾಳ್ವೆಯ, ಲೋಕ ಕಲ್ಯಾಣದ ತುಡಿತಗಳನ್ನು ಸಹ ಹೊಂದಿದೆ. ಲೋಕದ ಸಕಲ ಜೀವರಾಶಿಗಳನ್ನು ದುಃಖ ಕ್ಲೇಶಗಳಿಂದ ಬಿಡುಗಡೆ ಗೊಳಿಸಲು ಸದಾ ಪ್ರಯತ್ನಿಸಿ ಬದುಕು ಕ್ಷಣಿಕವಾದುದು, ಲೌಕಿಕ ಸುಖಭೋಗಗಳಿಗೆ ಅತಿಯಾಗಿ ದಾಸನಾಗದೆ, ಆಧ್ಯಾತ್ಮದ ಕಡೆಗೆ ಮನಸ್ಸನ್ನು ಹರಿಸಬೇಕೆಂದು ಬೋಧಿಸಿದೆ.

ಮನುಕುಲದ ಏಕತೆಗಾಗಿ ಒಂದೇ ಸಮನೆ ಧ್ಯಾನಿಸುವ ಜನಪದರ ಒಡಲಿನಿಂದಲೇ ಹುಟ್ಟುಪಡೆದ ಈ ತತ್ತ್ವಪದಗಳು ಸಮಸಮಾಜದ ನಿರ್ಮಾಣಕ್ಕಾಗಿ ದುಡಿದಿವೆ. ಇವು ಜಾತಿ–ಮತ, ಅಸ್ಪೃಶ್ಯತೆ, ಲಿಂಗಬೇಧದ ನೀತಿ, ವರ್ಗಬೇಧ ಹಾಗೂ ಧಾರ್ಮಿಕ ಮೌಢ್ಯಗಳ ಎಲ್ಲೆ ಮೀರಿ ಬದುಕನ್ನು ನಿಶ್ಚಿಂತಗೊಳಿಸುವ ಪರಿಶುದ್ಧ ಮನಸ್ಸಿನ ಪಾರದರ್ಶಕ ಅಭಿವ್ಯಕ್ತಿಗಳಾಗಿವೆ. ಮಾನವ ಬದುಕಿನ ವಿವಿಧ ಕಾಲಘಟ್ಟಗಳಲ್ಲಿ ರೂಪುಗೊಂಡ ಈ ತತ್ತ್ವಪದಗಳು ಪರಂಪರಾನುಗತವಾದ ಜ್ಞಾನ ಹಾಗು ವಿಸ್ತಾರವಾದ ಲೋಕಾನುಭವದಿಂದ ಮೂಡಿಬಂದಿವೆ.

ವೈಚಾರಿಕವಾಗಿ ಆಧ್ಯಾತ್ಮಿಕತೆಯಲ್ಲಿ ಸಾಧನೆಗೈದ ತತ್ತ್ವಪದಕಾರರು ಮೂಢನಂಬಿಕೆ, ಕಂದಾಚಾರ, ಆಷಾಢಭೂತಿತನವನ್ನು ಖಂಡಿಸಿದರು. ಧರ್ಮಕ್ಕೆ ಅನುಗುಣವಾದ ರೀತಿಯಲ್ಲಿ ಜನತೆಗೆ ಸಾಮಾಜಿಕ ಸಮಾನತೆ ಮತ್ತು ವೈಚಾರಿಕತೆಯ ಪ್ರಜ್ಞೆಯನ್ನು ಬಿತ್ತುವ ಕಾಯಕವನ್ನು ಕೈಗೊಂಡರು. ಹೀಗಾಗಿಯೇ ಇವರು ಜನಪದರ ಮನೆ–ಮನಗಳಿಗೆ ಸಮೀಪವಾಗಿರುವುದನ್ನು ನಾವು ಗುರುತಿಸಬಹುದು. ಇವರ ಇನ್ನೊಂದು ವಿಶೇಷತೆ ಎಂದರೆ ಅವರು ಜನತೆಗೆ ತಮ್ಮ ಚಿಂತನೆಗಳನ್ನು ತಲುಪಿಸಲು ಸೂಕ್ತವಾದ ವಿಶಿಷ್ಟ ಬಗೆಯ ಸಂಗೀತವನ್ನು ಬಳಸಿಕೊಂಡರು. ಏಕತಾರಿಯೊಡನೆ ಹಾಡುತ್ತಾ ಜನರಲ್ಲಿ ಏಕತಾ ಮತ್ತು ಸಮಾನತಾ ತತ್ತ್ವವನ್ನು ಬೋಧಿಸಿದರು. ವೈಚಾರಿಕತೆ ಮತ್ತು ಮಾನವೀಯ ಮೌಲ್ಯಗಳನ್ನು ಜನಸಾಮಾನ್ಯರಲ್ಲಿ ಮೂಡಿಸಲು ಪ್ರಯತ್ನಿಸಿದರು. ಆ ಮೂಲಕ ಸದಾ ಸಮುದಾಯದ ಒಳಿತನ್ನೇ ಬಯಸಿದರು. ಹೀಗೆ ತಮ್ಮ ನೆಲದ ಪರಿಸರದಲ್ಲಿ ವೈಯಕ್ತಿಕ ಹಾಗೂ ಸಾಮಾಜಿಕ ನೆಮ್ಮದಿ,

ಶಾಂತಿಯನ್ನು ನೆಲೆಗೊಳ್ಳುವಂತೆ ಮಾಡುವಲ್ಲಿ ಈ ಜಿಲ್ಲೆಯ ತತ್ತ್ವಪದಕಾರರು ಶ್ರಮಿಸಿದ್ದಾರೆ.

ಈಗಾಗಲೇ ತಿಳಿದಂತೆ ತತ್ತ್ವಪದ ಸಾಹಿತ್ಯದ ಆದ್ಯ ಪ್ರವರ್ತಕರೆಂದೇ ಹೆಸರಾಗಿರುವ ಶ್ರೀನಿಜಗುಣ ಶಿವಯೋಗಿಗಳಿಂದ ಗಹನವಾದ ಮತ್ತು ಉದಾತ್ತವಾದ ತತ್ತ್ವಗಳುಳ್ಳ ಜನಪ್ರಿಯವಾದ, ಸರಳವಾದ ಹೊಸ ಸಾಹಿತ್ಯ ಪ್ರಕಾರವೇ ಸೃಷ್ಟಿಯಾಯಿತು. ಲಿಖಿತರೂಪದಲ್ಲಿ 'ಕೈವಲ್ಯ ಪದ್ಧತಿ' ಎಂಬ ಹೆಸರಿನ ತತ್ತ್ವಪದಗಳ ಸಂಕಲನವನ್ನು ಲೋಕಾರ್ಪಣೆ ಮಾಡಿದರು. ಈ ಹಸ್ತಪ್ರತಿಗಳು ಇಂದಿಗೂ ಅನೇಕ ಮಠಮಾನ್ಯಗಳಲ್ಲಿ ರಕ್ಷಿಸಲ್ಪಟ್ಟಿವೆ. ಹೀಗೆ ನಿಜಗುಣರು ಕೈವಲ್ಯ ಸಾಹಿತ್ಯವೆಂಬ ಹೆಸರಿನಲ್ಲಿ ಒಂದು ಪರಂಪರೆಯನ್ನು ಸೃಷ್ಟಿಸಿ ಮುಂದಿನ ಅನುಭಾವಿಗಳಿಗೆ ದಾರಿದೀಪವಾದರು. ಹಾಗೆಯೇ ಕನ್ನಡದಲ್ಲಿ ತತ್ತ್ವಪದ ಸಾಹಿತ್ಯ ಪರಂಪರೆಗೆ ನಾಂದಿ ಹಾಡಿದರು.

ನಿಜಗುಣ ಶಿವಯೋಗಿಗಳು ತಮ್ಮ 174 ಪದಗಳನ್ನು 5 ಸ್ಥಲಗಳಲ್ಲಿ ಹೊಂದಿಸಿ 'ಕೈವಲ್ಯ ಪದ್ಧತಿ' ಎಂಬ ಕೃತಿಯನ್ನು ರಚಿಸಿದರು. ಇದರಲ್ಲಿ ಗಹನವೂ, ನೈತಿಕವೂ ಆದ ವಿಷಯಗಳನ್ನು ಸರಳವಾಗಿ ನಿರೂಪಿಸಲಾಗಿದೆ.

***"ದುರಿತ ಕರ್ಮವನ್ನೊಲದಿರು***
***ಪುಣ್ಯವನೆ ಮಾಡು ಹರನಡಿಯ ಪಿಡಿ***
***ಶಾಂತರೊಡನಾಡು ಜೀವರೊಳು ಕರುಣವಿರಲಿ***
***ನೀತಿವಿದನಾಗು ಪೊರ್ದಿದರ ಪೊರೆ***
***ಕುದುವಡೆಯದೆ ಇರು ಕಾಮಾದಿಗಳನು ಜಯಿಸು"***

ಎನ್ನುವಲ್ಲಿ ಬದ್ಧನಾದ ಮನುಜನಿಗೆ ಉದ್ಧಾರದ ಹಾದಿಯನ್ನು ತೋರಿದ್ದಾರೆ. ಸದಾ ಕಾಯಕ ಮಾಡುತ್ತಾ, ಶಾಂತಿಪ್ರಿಯರ ಸಂಗಡದೊಂದಿಗೆ ಸಕಲ ಜೀವರಾಶಿಯನ್ನು ಕರುಣೆ–ಪ್ರೀತಿಯಿಂದ ಕಾಣು ಎನ್ನುತ್ತಾರೆ. ಆಸೆಗಳನ್ನು ಜಯಿಸಿ ನೀತಿವಂತನಾಗು ಎಂದು ಬೋಧಿಸಿದ್ದಾರೆ.

ಈ ತೆರನಾದ ಪದಗಳಿಂದಲೇ ನಿಜಗುಣರು ಸಕಲ ಜನ–ಮನವನ್ನು ಸೂರೆಗೊಂಡರು. ಇವರ ಪದಗಳ ಭಾವ–ಭಾಷೆ ಮತ್ತು ಸಂಗೀತ ಎಲ್ಲಾ ದೃಷ್ಟಿಯಿಂದಲೂ ವಿಶೇಷವಾದವು. ಇಂದಿಗೂ ಮಠ ಮಾನ್ಯಗಳಲ್ಲಿ, ಸಭೆ ಸಮಾರಂಭಗಳಲ್ಲಿ, ಭಜನಾ ಮಂದಿರಗಳಲ್ಲಿ ಈ ಪದಗಳದ್ದೇ ಮೇಲುಗೈ. ಇವುಗಳನ್ನು ಅನುಭಾವಿಗಳು, ಹಾಡುಗಾರರು ಪ್ರವಚನಗಳಲ್ಲಿ ವ್ಯಾಖ್ಯಾನಿಸುತ್ತಾರೆ. ಹಳ್ಳಿಗರು ಭಜನಾ ಮೇಳಗಳ ಸತ್ಸಂಗದಲ್ಲಿ ಹಾಡುತ್ತಾ ಚರ್ಚಿಸುವ ಪರಂಪರೆ ಇಂದಿಗೂ ಚಾಮರಾಜನಗರ ಜಿಲ್ಲೆಯಾದ್ಯಂತ ಆಚರಣೆಯಲ್ಲಿದೆ. ಜನಸಾಮಾನ್ಯರ ಆಡುಭಾಷೆಯಲ್ಲಿ ಮೂಡಿಬಂದಿರುವ ಆಧ್ಯಾತ್ಮಪರವಾದ, ತತ್ತ್ವಪರವಾದ ನಿಜಗುಣರ ಹಾಡುಗಳು ಕೇಳುಗರನ್ನು ತಮ್ಮ ನಾದ ಗುಣದಿಂದ ಮೋಡಿಮಾಡಿ ಬಿಡುತ್ತವೆ. ಅವುಗಳ ಅಂತರಾಳದಲ್ಲಿ ಗೂಢವಾದ ಅರ್ಥವಿದೆ. ಆದರೆ ಮೇಲುನೋಟಕ್ಕೆ ಸಾಮಾನ್ಯ ಪದಗಳ ಹಾಗೆ ಕಾಣುತ್ತವೆ. ಅದರ ನಾದದ ಹಿಂದೆಯೇ ಸಾಗಿದರೆ ಪದದ ಭಾವ ತಟ್ಟನೆ ಹೊಳೆಯುತ್ತದೆ.

ನಿಜಗುಣರ ರಚನಾ ಶೈಲಿಯಲ್ಲಿ ಲಾಲಿತ್ಯ, ಮಾಧುರ್ಯ, ನಾದ ಸಂಪತ್ತಿದೆ ಎಂಬುದನ್ನು ಅವರ ತತ್ತ್ವಪದಗಳಲ್ಲಿ ಸ್ಪಷ್ಟವಾಗಿ ಗುರುತಿಸಬಹುದು. ಇವರು ತಮ್ಮ ಕೃತಿಗಳನ್ನು 'ಪಲವು ಶೃತಿಗಳಿಂದೆ... ಪಲವನು ಭವದಿಂದೆ.. ಪಲವು ದೃಷ್ಟಾಂತ ಯುಕ್ತಿಗಳಿಂದೆ' ಸ್ವಾದ್ಯ ಯೋಗ್ಯವಾಗುವಂತೆ ಮಾಡುತ್ತಾರೆ. ಅವರು ನೀಡುವ ಉಪಮೆಗಳಂತೂ ಅರ್ಥಪೂರ್ಣವಾಗಿರುತ್ತವೆ.

ಉದಾ:

***"ತರುಣಿಯ ಮೊಲೆಯೊಂದನುಣುತಲಣುಗನನ್ಯ***
***ಕರದೊಳುಳಿದ ಕುಚಾಗ್ರನ ನೋಪುದಂತೆ***
***ನರಜನ್ಮವಿಡಿದಿಹ ಭೋಗಾನುಭವದೊಳು***
***ಪರಲೋಕಗತಿಯ ಸಾಧನದೊಳೊಂದಿಹನು***
***... ... ... ... ... ... ... ... .... .... ... .. ....***

*ಕಣ್ಣೊಳಿರ್ದ ಕಸಮಂ ತೆಗೆದು ಕಾಣಲಾಗಿ ಬಾಧೆ ತೊಗಲಗುವಂತೆ"*

ಇಂತಹ ನೂರಾರು ಉಪಮೆಗಳು ಅರ್ಥವತ್ತಾಗಿ ನಿಜಗುಣರಿಂದ ಪ್ರಯೋಗಿಸಲ್ಪಟ್ಟಿವೆ. ಮನವೆಂಬ ಕೋಗಿಲೆಯನ್ನು ಉದ್ದೇಶಿಸಿ ಪರಿಪರಿಯಾಗಿ ಮಾಡಿದ ಹಿತೋಪದೇಶ ತುಂಬಾ ಸೊಗಸಾಗಿ ಮೂಡಿಬಂದಿದೆ.

*"ಕೋಗಿಲೆ ಚೆಲ್ವ ಕೋಗಿಲೆ ಮುದ್ದು*
*ಕೋಗಿಲೆ ಜಾಣ ಕೋಗಿಲೆ*
*ಹಿಂದೆ ತಪದೊಳೀಶನೊಂದಿರುತಿರಲೆಚ್ಚು*
*ಬೆಂದ ಕಾಮನ ಬಿಟ್ಟು ಕೋಗಿಲೆ*
*ಬಂದು ಬೇಗದಿ ಬಾಲೇಂದುಧರನ ಕೂಡಿ*
*ಕುಂದದೆ ನೀ ಬಾಳೆ ಕೋಗಿಲೆ"*

ಎಂದು ಮುಂದುವರಿಯುವ ಈ ಪದದಲ್ಲಿ ನಿಜಗುಣರ ಕಲ್ಪನಾ ವಿಲಾಸವಿದೆ. ಸೌಂದರ್ಯ ಪ್ರಜ್ಞೆ ಅರಳಿ ನಿಂತಿದೆ. ಕನ್ನಡ ಸಾಹಿತ್ಯ ಪ್ರಪಂಚದ ಕೋಗಿಲೆ ಕಾಮನ ಬಳಗಕ್ಕೂ, ಆಧ್ಯಾತ್ಮ ಸೀಮೆಯ ಕೋಗಿಲೆ ಶಿವನ ಬಳಗಕ್ಕೂ ಸೇರಿರುವುದು ಪ್ರಸಿದ್ಧವಾಗಿದೆ. ಕಾಮನ ಬಳಗವನ್ನು ಬಿಟ್ಟು ಶಿವನ ಬಳಗ ಸೇರುವಂತೆ ಕವಿ ಕೋಗಿಲೆಯನ್ನು ಒಲಿಸುವಾಗ ಭೋಗದ ನಶ್ವರತೆ ನಿರುಪಯುಕ್ತತೆಯನ್ನು ಯೋಗದ ಚಿರಂತರತೆ ಅಪೂರ್ವತೆಯನ್ನು ಅಕ್ಕಪಕ್ಕದಲ್ಲಿಟ್ಟು ವರ್ಣಿಸುತ್ತಾ ಹೋಗುತ್ತಾರೆ. ಚಾಮರಾಜನಗರ ಜಿಲ್ಲೆಯ ತುಂಬಾ ಕಾಣಸಿಗುವ ನಿಜಗುಣರ ಇಂತಹ ಅನೇಕ ಪದಗಳಲ್ಲಿ "ಭಕ್ತಿಭಾವದ ಮಿಡಿತ, ಪ್ರಾಸದ ಸೊಗಸು, ಪದವಿನ್ಯಾಸದ ಬೆಡಗು, ಛಂದಸ್ಸಿನ ವೈವಿಧ್ಯತೆ, ಅಲಂಕಾರಗಳ ಮಾಧುರ್ಯ, ಸೌಂದರ್ಯ ಪ್ರಜ್ಞೆ, ಸಂಗೀತದ ನಯಗಾರಿಕೆ ಇವು ರಾರಾಜಿಸುತ್ತವೆ"[6] ಎಂಬ ಮಾತು ಅರ್ಥವತ್ತಾಗಿದೆ.

ಚಾಮರಾಜನಗರ ಸೀಮೆಯಲ್ಲಿ ವಾಸವಾಗಿದ್ದ 'ಮುಪ್ಪಿನ ಷಡಕ್ಷರಿ' ಅವರು ಕನ್ನಡನಾಡು ಕಂಡ ಶ್ರೇಷ್ಠ ಅನುಭಾವಕವಿ, ತತ್ತ್ವಪದಕಾರರು. ಇವರು ನಿಜಗುಣ ಶಿವಯೋಗಿಗಳ ಸಮಕಾಲೀನರು. ಇವರ ಕಾಲ ದೇಶ ಕೃತಿಗಳು ಸಾಕಷ್ಟು ಚರ್ಚೆಗಳೊಳಗಾಗಿವೆ. ಇವರು ಒಂದು ರೀತಿಯಲ್ಲಿ ಅಜ್ಞಾತ ಕವಿಗಳಾಗಿ ಕಂಡುಬರುತ್ತಾರೆ. ಇವರು ತಮ್ಮ ಪದಗಳಲ್ಲಿ ಎಲ್ಲಿಯೂ ಸ್ವಂತ ವಿಚಾರಗಳನ್ನು ಹೇಳಿಕೊಂಡಿಲ್ಲ. ತಮ್ಮ ಗುರುಗಳನ್ನು ಕುರಿತು ಒಂದು ಪದದಲ್ಲಿ ಹೀಗೆ ಹೇಳಿದ್ದಾರೆ.

*"ಎರಗಂಬಳ್ಳಿಯ ಸಿದ್ಧ*
*ವರಲಿಂಗ ನಾಮದಿಂ*
*ಹರನೇ ನೀನೆನಗೆ ದೀಕ್ಷೆಯ ಮಾಡಿದೆ*
*ವರ ಷಡಕ್ಷರಿಯ ದೇ*
*ವರ ನಾಮದಿಂದೆನಗೆ*
*ಅರುಹಿದಿರಿ ಶಿವಶಾಸ್ತ್ರದನುಭವವನು"*

ಎಂದು ಗುರುವನ್ನು ಸ್ಮರಿಸಿದ್ದಾರೆ. ಇದರ ಆಧಾರದ ಮೇಲೆ ಕವಿಚರಿತಕಾರರು ಇವರನ್ನು ಎರಗಂಬಳ್ಳಿಯ ಸಿದ್ಧಲಿಂಗರ ಶಿಷ್ಯ ಎಂದು ಊಹಿಸಿದ್ದಾರೆ. ಸಿದ್ಧಲಿಂಗರಿಂದ ದೀಕ್ಷೆಯನ್ನು ಹೊಂದಿ ನೂತನ ನಾಮಾಂಕಿತವನ್ನು ಪಡೆದುದರಿಂದ ಮುಪ್ಪಿನ ಷಡಕ್ಷರಿಗಳು ಸಿದ್ಧಲಿಂಗ ಮಠಕ್ಕೆ ಅಧಿಪತಿಗಳಾಗಿದ್ದರಬಹುದು ಎಂದು ಅಲ್ಲಿನ ಸ್ಥಳೀಯರು ಅಭಿಪ್ರಾಯ ಪಡುತ್ತಾರೆ. ಎರಗಂಬಳ್ಳಿ ಗ್ರಾಮವು ಚಾಮರಾಜನಗರ ಜಿಲ್ಲೆ ಯಳಂದೂರು ತಾಲ್ಲೂಕಿನಲ್ಲಿದೆ. ಅಲ್ಲಿ ಷಡಕ್ಷರಿಯವರ ಗದ್ದುಗೆಯಿದ್ದು, ನಿಜಗುಣ ಶಿವಯೋಗಿಗಳು ವಾಸವಿದ್ದ ಚಿಲಕವಾಡಿಗೆ ಸನಿಹದಲ್ಲಿದೆ. ಎ(ಯ)ರಗಂಬಳ್ಳಿಯಲ್ಲಿ ಮುಪ್ಪಿನ ಷಡಕ್ಷರಿಯವರು ತಪೋನುಷ್ಠಾನಗೈದರೆಂದು ಹೇಳುವ "ಮುಪ್ಪಿನ ಷಡಕ್ಷರಿಗಳ ಗವಿ" ಎಂಬ ಜನಜನಿತವಾದ ಸ್ಥಳ ಇಂದಿಗೂ ಸ್ಥಳೀಯರಿಂದ ಪೂಜೆಗೊಳ್ಳುತ್ತಿದೆ.

ಕವಿಚರಿತಕಾರರು ಮುಪ್ಪಿನ ಷಡಕ್ಷರಿಗಳ ಕಾಲವನ್ನು ಕ್ರಿ.ಶ.1750 ಎಂದು ಊಹಿಸಿದ್ದಾರೆ. ಇವರು ಷಡಕ್ಷರಲಿಂಗ ಎಂಬ ಅಂಕಿತದಲ್ಲಿ ಹಲವಾರು ಪದಗಳನ್ನು ರಚಿಸಿದ್ದಾರೆ. ಅವುಗಳನ್ನು 'ಕೈವಲ್ಯಪದ'ಗಳೆಂದು ಕರೆಯಲಾಗಿದೆ. ಈ ಪದಗಳನ್ನು 'ಮುಪ್ಪಿನ ಷಡಕ್ಷರಿಗಳ ಕೈವಲ್ಯ ಪದಗಳು'

ಎಂಬ ಹೆಸರಿನಿಂದ ಸಂಗ್ರಹಿಸಲಾಗಿದೆ. ಮುಪ್ಪಿನ ಷಡಕ್ಷರಿಗಳು ರಚಿಸಿದ ಕೃತಿ ಒಂದೇ ಆದರೂ ಅದು ಸತ್ವಪೂರ್ಣವಾಗಿದೆ. ಅವರ ದಿವ್ಯಾನುಭವದ ಅಮರಗೀತೆಗಳು ಜನಸಾಮಾನ್ಯರಿಗೂ ಅರ್ಥವಾಗುವಷ್ಟು ಸರಳ, ಸುಂದರವಾಗಿದೆ. ಆರೂಢ ಮಾರ್ಗವನ್ನು ಹಿಡಿದು ಮುನ್ನಡೆದ ಮುಪ್ಪಿನಾರ್ಯರ ಮೇಲೆ ವಚನಗಳ ಪ್ರಭಾವ ಅಧಿಕವಾಗಿ ಆಗಿದೆ. ಮುಪ್ಪಿನ ಷಡಕ್ಷರಿಯವರು ವಚನಕಾರರನ್ನು ನೆನೆದು ಭಕ್ತಿ, ಜ್ಞಾನ, ವೈರಾಗ್ಯಗಳನ್ನು ಭಿಕ್ಷೆಬೇಡಿ ತಮ್ಮ ಮನದ ಜೋಳಿಗೆಯನ್ನು ತುಂಬಿಕೊಂಡಿದ್ದಾರೆ. ತಮ್ಮನ್ನು ಹೆಣ್ಣು ಮಗಳಿಗೆ ಹೋಲಿಸಿಕೊಂಡು ಶರಣರನ್ನು ತವರುಮನೆಯವರಂತೆ ಭಾವಿಸಿ ತಮ್ಮನ್ನು ಯಾವಾಗ ತವರಿಗೆ ಕರೆಯಲು ಬರುತ್ತಾರೋ ಕಾಣೆ ಎಂದು ಕಾತರದಿಂದ ಹಂಬಲಿಸುವ ಚಿತ್ರ ಹೃದಯಂಗಮವಾಗಿದೆ.

*"ಹೆಮ್ಮಗಳು ನಾ ನಿಮ್ಮ*
*ನೆಮ್ಮಿಕೊಂಡಿರುವನ್ನೆ*
*ಗಮ್ಮನೇ ಎನ್ನುವುದ ಕರೆಯ ಬನ್ನಿ"*[8]

ಎನ್ನುವ ಷಡಕ್ಷರಿ ಅವರ ಪದವು ಅನೇಕ ತತ್ತ್ವಪದಕಾರರು ಹಿಂದಿನ ವಚನಕಾರರಿಂದ ಪ್ರಭಾವಿತರಾಗಿರುವುದನ್ನು ತಿಳಿಸುತ್ತದೆ. ಇಲ್ಲಿ ಶರಣಸತಿ ಲಿಂಗಪತಿ ಭಾವ ಪುನರಾನುಭವಗೊಂಡು ಒಡಮೂಡಿದೆ.

ಶರೀರವು ಧರ್ಮವಿಡಿದು ಅನ್ನಕ್ಕಾಗಿ ಅಲೆಯುವಾಗ

*"ಒಡೆದ ಗಡಿಗೆ ಹರಿದ ಜೋಳಿ*
*ಗೆಡದ ಕೈಯ್ಯ ಮುರಿದ ಕೋಲು*
*ಹಿಡಿದು ಊರನೆಲ್ಲ ತಿರಿದು ತಂದು ನೋಡಲು*
*ಒಡಲಿಗಾಗದಂತೆ ಮಾಡು*
*ಪೊಡವಿಯೊಳಗೆ ಸುಖವ ಮೆಚ್ಚಿ*
*ಒಡೆಯ ನಿಮ್ಮ ಮರೆದು ಭವಕೆ ಬೀಳಲಾರೆನು"*[9]

ಎಂದು ಬೇಡಿಕೊಂಡಿದ್ದಾರೆ.

ಮುಪ್ಪಿನಾರ್ಯರು ತಮ್ಮ ಪದದಲ್ಲಿ ಮನಸ್ಸು ಅಷ್ಟು ಸುಲಭವಾಗಿ ತಮ್ಮ ಹತೋಟಿಗೆ ಬರುವ ವಸ್ತುವಲ್ಲ ಎನ್ನುತ್ತಾರೆ. ಇದನ್ನು ನೋಡಿದಾಗ ಮನವನ್ನು ಗೆಲ್ಲಲು ಅವರು ನಡೆಸಿರುವ ಹೋರಾಟವೆಷ್ಟು ಎಂಬುದರ ಅರಿವಾಗುತ್ತದೆ.

*"ಹುಲಿಯ ಕರಡಿ ಕರಿಯ ಫಣಿಯ*
*ಬಹುಹಿನಿಂದಲಾಳ್ವರುಂಟು*
*ಚಲಿಸದಂತೆ ಮನವನಾಳ್ವರಾರ ಕಾಣೆನು"*[10]

ಎಂದು ಮೊರೆಯಿಡುತ್ತಾ ತಮ್ಮ ಸಾಧನೆಯ ಫಲದಿಂದ ದೊರೆತ ಸುಜ್ಞಾನದ ಖಡ್ಗದಿಂದ ತಮ್ಮ ಹೀನ ಮನದ ಬಯಕೆಗಳನ್ನು ಮುಪ್ಪಿನ ಷಡಕ್ಷರಿ ಅವರು ಕಡಿದು ಹಾಕಿದರು.

ಹೀಗೆ ಭಕ್ತಿ, ಜ್ಞಾನ, ವೈರಾಗ್ಯಗಳು ಮುಪ್ಪುರಿಗೊಂಡು ಹೊರಹೊಮ್ಮಿರುವ ಅವರ ತತ್ತ್ವಪದಗಳು ಅನುಭಾವದ ಸಂಪತ್ತಿನಿಂದ ಕೂಡಿವೆ. ಸುಂದರ ಅಭಿವ್ಯಕ್ತಿಯಿಂದ, ಸಹಜ ಸ್ಫೂರ್ತಿಯಿಂದ ಹೃದಯಂಗಮವಾಗಿವೆ.

ಚಾಮರಾಜನಗರ ಜಿಲ್ಲೆಯ ವಿವಿಧ ಭಾಗಗಳಲ್ಲಿ ನಿಜಗುಣ ಶಿವಯೋಗಿ ಮತ್ತು ಮುಪ್ಪಿನ ಷಡಕ್ಷರಿಗಳ ನಂತರ ಅವರಿಂದ ಪ್ರಭಾವಿತರಾದ ಅನೇಕ ತತ್ತ್ವಪದಕಾರರು ಉದಯಿಸಿದರು. ಇವರಲ್ಲಿ ಕೆವಲರು ತಳಸಮುದಾಯದವರಾಗಿದ್ದು, ಅಕ್ಷರ ಲೋಕದಿಂದ ತುಸು ದೂರವೇ ಉಳಿದಿದ್ದರು. ಆದರೆ ಅವರು ಪದಗಳನ್ನು ಕಟ್ಟುತ್ತಾ, ಹಾಡುತ್ತಾ ಜನಾನುರಾಗಿಗಳಾಗಿ ಜಿಲ್ಲೆಯಾದ್ಯಂತ ತಿರುಗಿರುವ ಕುರುಹುಗಳು ಅಲ್ಲಲ್ಲಿ ಕಾಣಸಿಗುತ್ತವೆ. ಹಾಗೆಯೇ ಹಲವಾರು ತತ್ತ್ವಪದಕಾರರು ಮತ್ತು ಅವರ ತತ್ತ್ವಪದಗಳ ಮಾಹಿತಿಗಳು ಪೂರ್ಣ ಪ್ರಮಾಣದಲ್ಲಿ ದೊರಕದೇ ಇರುವುದು ವಿಷಾದಕರ ವಿಚಾರವೇ ಸರಿ. ಆದರೂ ದೊರೆತ ಮಾಹಿತಿಯ ಆಧಾರದ ಮೇಲೆ ಕೆಲವು ತತ್ತ್ವಪದಕಾರರನ್ನು ಹೆಸರಿಸಬಹುದು. ಅವರುಗಳೆಂದರೆ ಕೊಳ್ಳೇಗಾಲ ಹತ್ತಿರದ ಮಧುವಿನಹಳ್ಳಿ ನಂಜುಂಡಶಾಸ್ತ್ರಿ, ದೇವಲಾಪುರದ ನಂಜುಂಡ ಪಂಡಿತ, ಕರಿಬಸವಶಾಸ್ತ್ರಿ, ಹೊಂಡರಬಾಳಿನ ಅರಸು, ದೊಡ್ಡಿಂದುವಾಡಿ

ಮಾಸ್ಟರ್ ಪುಟ್ಟಮಲ್ಲಪ್ಪ. ಯರಗಂಬಳ್ಳಿಯ ಗುರುಪೇರ್ಸಿಂಗ ಮೂರ್ತಿ, ದಡದಹಳ್ಳಿ ಮಹದೇವಯ್ಯ, ದೊಡ್ಡಮೋಳೆ ರಂಗಯ್ಯ, ಅಂಬಳೆ ಕರುಗಪ್ಪಸ್ವಾಮಿ ಹಾಗೂ ಕುಣಗಳ್ಳಿಯ ಗುರುನಂಜಪ್ಪಸ್ವಾಮಿ, ಕುಮಾರನಿಜಗುಣ ನಾಮಧೇಯದ ಪಿ.ಬಸವಣ್ಣ ಇನ್ನೂ ಹಲವರಿದ್ದಾರೆ.

ಯಳಂದೂರಿನ ಗೌರಿಶಂಕರನ ಶಿಷ್ಯ ಪಶಾಲ್ಯ ಕೃಷ್ಣರಾಜ ಅರಸು ಎಂಬ ತತ್ತ್ವಪದಕಾರ ತಾನು ಅರಸು ವಂಶಕ್ಕೆ ಸೇರಿದವನಾಗಿದ್ದರೂ ವಚನಕಾರರ, ತತ್ತ್ವಪದಕಾರರ ಆದರ್ಶಗಳನ್ನು ಒಪ್ಪಿಕೊಂಡು ತನ್ನನ್ನು ಅದರಲ್ಲಿ ಅರ್ಪಿಸಿಕೊಂಡಿದ್ದನು. ಹಿಂದಿನವರಂತೆಯೇ ಹಲವಾರು ಪದಗಳನ್ನು ರಚಿಸಿ ಹಾಡಿರುವ ಇವರು 'ಭಕ್ತಿ ಮಾರ್ಗ ಸರೋವರ' ಮತ್ತು 'ಜ್ಞಾನ ಮಾರ್ಗಸರೋವರ" ಎಂಬ ಕೃತಿಗಳನ್ನು 1885ರಲ್ಲಿ ರಚಿಸಿದ್ದಾರೆ. ಇವರ ಹೆಚ್ಚಿನ ಹಾಡುಗಳಲ್ಲಿ ಅಕ್ಕಮಹಾದೇವಿಯ ಹಾಗೆಯೆ ಶರಣಸತಿ ಲಿಂಗಪತಿ ಭಾವ ವ್ಯಕ್ತವಾಗಿರುವುದು ಕಂಡುಬರುತ್ತದೆ.

***ಏನೇ ನಾಯಕಿ / ಎನ್ನ ಮೇಲಣ ಕರುಣ***
***ನಿನಗಿನಿತಿಲ್ಲವೆ?***

ಎಂದು ಗುರು ಕಾರುಣ್ಯವನ್ನು ಮತ್ತು ಗುರು ಸಾಂಗತ್ಯದ ಮಹತ್ವನ್ನು ಸಾರುವ ಹಾಡಿನ ಅಂತ್ಯ ಚರಣ ಹೀಗಿದೆ.

***"...ಬಾಲ ಚಂದ್ರನ / ಪುರದೊಳುದಿನ***
***ಪಾಲಿಸುವ / ಗೌರೀಶನಾ / ಬಾಲೆ ನೀ ಪೋಗಿ ಕರೆದು ತಾರೆ***
***ಛಲಮನದ / ಬೀಷ್ಟೆ ಕಾಂತನ"***[1]

ಈ ಚರಣದಿಂದ ಕೃಷ್ಣರಾಜರು ಬಾಲೆಂದುಪುರದ (ಯಳಂದೂರು) ಗೌರಿಶಂಕರನ ಶಿಷ್ಯ ಎಂಬುದು ತಿಳಿದುಬರುತ್ತದೆ.

ಹೊಂಡರಬಾಳಿನ ಅರಸು ಅವರು ಚಾಮರಾಜನಗರ ಜಿಲ್ಲೆಯಲ್ಲಿ ಪ್ರಖ್ಯಾತಿ ಪಡೆದ ತತ್ತ್ವಪದಕಾರರು ಮತ್ತು ನಾಟಕಕಾರರು ಆಗಿದ್ದರು. ಇವರು ಅನೇಕ ತತ್ತ್ವಪದಗಳನ್ನು ಕಟ್ಟಿ ಹಾಡಿದ್ದಾರೆ. ತಾವು ಕಂಡುಂಡು ಅನುಭವಿಸಿದ ನೋವು–ನಲಿವುಗಳನ್ನು, ಕಷ್ಟ–ಕಾರ್ಪಣ್ಯ, ಆಸೆ–ಆಕಾಂಕ್ಷೆ, ಸುಖ–ದುಖ, ಮೂಢನಂಬಿಕೆ, ಕಂದಾಚಾರ, ಮೇಲು–ಕೀಳು ಇತ್ಯಾದಿ ಅಂಶಗಳ ಜೊತೆಗೆ ಬದುಕಿನ ವಿವಿಧ ಆಯಾಮಗಳನ್ನು ಕುರಿತು ತತ್ತ್ವಪದಗಳನ್ನು ರಚಿಸಿ ಜಿಲ್ಲೆಯಾದ್ಯಂತ ಸಂಚರಿಸಿ ಹಾಡಿದ್ದಾರೆ.

***ಸಂಗನ ಬಸವೇಶ ಚಿಃಜ್ಯೋತಿಯೇ/***
***ಶ್ರೀಗುರು ಜಿನುಮಯ ರೂಪಾ ಶಿವಾ/***

ಎಂದು ಆರಭಗೊಳ್ಳುವ ಪದವು ಚಾಮರಾಜನಗರದ ಎಲ್ಲಾ ಕಡೆಗಳಲ್ಲಿ ಜನಪ್ರಿಯವಾಗಿದೆ. ಗಮನಾರ್ಹವಾದ ಪಾರಮಾರ್ಥಿಕ ತತ್ತ್ವ ಅಥವಾ ಸಿದ್ಧಾಂತಗಳನ್ನು ಸರಳ ರೀತಿಯಲ್ಲಿ ಜನ ಸಾಮಾನ್ಯರಿಗೆ ತಿಳಿಯುವಂತೆ ಇವರು ನಿರೂಪಿಸಿದ್ದಾರೆ. ಒಮ್ಮೆ ಇವರ ಸಹೋದರರು ಆಸ್ತಿಯ ಪಾಲಿಗಾಗಿ ಇವರನ್ನು ಕೇಳಿದಾಗ, ತಕ್ಷಣವೇ ಅರಸು ಅವರು ಎಲ್ಲಾ ಸಹೋದರರಿಗೆ ಅವರವರ ಪಾಲನ್ನು ಹಂಚಿ, ಸಮಾಧಾನವಾಗಿ ಮನೆಯ ಹೊರಗೆ ಬಂದು ಕಟ್ಟೆಯ ಮೇಲೆ ಕುಳಿತು

***"ಪಾಲು ಪಾಲು ಇದು ಯಾತರ ಪಾಲು***
***ಪಾಲು ಹಂಚಿಹ ಶಿವ ಮೊದಲು***
***ದೇಹ ನೋಡಲು ಮೃತ್ತಿಕೆ ಪಾಲು***
***ಜೀವನ ನೋಡಲು ವಾಯ ಪಾಲು***
***ಪುಣ್ಯ ನೋಡಲು ಸುಖದ ಪಾಲು***
***... ... ... ... ... ... ... ... ... ... ...***
***ಭಕ್ತ ಭವತಾರಕನ ಪಾಲು"***[2]

ಎಂಬುದಾಗಿ ಹಾಡಿ ಜೀವನದ ನಿಜ ಸಂಗತಿಯನ್ನು ತಿಳಿಸಿದರಂತೆ. ನಮ್ಮ ಜೀವನ, ದೇಹವೆಲ್ಲವು ಮೊದಲೇ ಶಿವನಿಂದ ಹಂಚಿಕೆಯಾಗಿದೆ. ನೀರಿನ ಮೇಲಿನ ಗುಳ್ಳೆಯಂತಿರುವ ಹಣ, ಆಸ್ತಿಯನ್ನು, ಪಾಲು ಮಾಡಿರುವುದರಲ್ಲಿ ಅರ್ಥವಿಲ್ಲ.

ಯಾಕೆಂದರೆ ಇವು ಯಾವುದು ಶಾಶ್ವತವಲ್ಲ ಎಂಬ ಎಚ್ಚರಿಕೆಯನ್ನು ನೀಡಿದ್ದಾರೆ.

***"ದೇವರ ಮನೆಯಿದು ಜಗವೆಲ್ಲಾ***
***ಬಾಡಿಗೆದಾರರು ಜೀವಿಗಳೆಲ್ಲಾ***
***ನಾನೇ ಕಟ್ಟಿಸಿದೆ ನಾನೇ ಹುಟ್ಟಿಸಿದೆ***
***ಎಂಬುದೆಲ್ಲಾ ಜಂಭದ ಸೊಲ್ಲಾ***
***ಅಂತ್ಯಕೆ ಸೋಲು ಈ ನುಡಿ ಪೊಳ್ಳು"***[13]

ಸಕಲ ಜೀವಿಗಳೆಲ್ಲ ಒಂದೆಂಬ ಸಾರುವ ಈ ತತ್ತ್ವಪದವು ಮಾಂಬಳ್ಳಿ ಮಲ್ಲಿಕಾರ್ಜುನಸ್ವಾಮಿ ಅವರ ರಚನೆಯಾಗಿದೆ. ಇಲ್ಲಿ ಅವರು ಸಹ ಮಾನವರೊಂದಿಗೆ ಸೋದರತ್ವದಿಂದ ಬದುಕು ನಡೆಸಲು ಕರೆ ನೀಡಿದ್ದಾರೆ. ಇಡೀ ಜಗತ್ತನ್ನೇ ದೇವರ ಮನೆಯೆಂದು ವ್ಯಾಖ್ಯಾನಿಸುವ ಮಲ್ಲಿಕಾರ್ಜುನಸ್ವಾಮಿ ಅವರು ಮನುಷ್ಯನನ್ನು ಒಳಗೊಂಡಂತೆ ಎಲ್ಲಾ ಜೀವಿಗಳು ಬಾಡಿಗೆದಾರರು ಎಂದು ಕರೆದಿರುವುದು ಈ ಜೀವ ಜಗತ್ತು ಅಶಾಶ್ವತ ಎಂಬುದನ್ನು ನಿರೂಪಿಸುತ್ತದೆ. ಆದ್ದರಿಂದಲೇ ಬದುಕಿರುವಷ್ಟು ದಿನಗಳಲ್ಲಿ ಎಲ್ಲರೊಳಗೊಂದಾಗಿ ಬದುಕ ಬೇಕೆಂಬ ನಿರ್ಧಾರ ಎಲ್ಲರಲ್ಲಿಯೂ ಮೂಢಬೇಕಿದೆ ಎಂಬ ಆಶಯವನ್ನು ಈ ತತ್ತ್ವಪದ ಪ್ರತಿಪಾದಿಸುತ್ತದೆ.

ಮನುಕುಲದ ಏಕತೆಗಾಗಿ ಒಂದೇ ಸಮನೆ ಧ್ಯಾನಿಸುವ, ಜನಪದರ ಒಡಲಿನಿಂದಲೇ ಹುಟ್ಟು ಪಡೆದ ಈ ಜಿಲ್ಲೆಯ ತತ್ತ್ವಪದಗಳು ಸಮ ಸಮಾಜದ ನಿರ್ಮಾಣಕ್ಕಾಗಿ ದುಡಿದಿವೆ. ಇವು ಜಾತಿ ಮತ, ಅಸ್ಪೃಶ್ಯತೆ, ಲಿಂಗಬೇಧದ ನೀತಿ, ವರ್ಗಭೇದ ಹಾಗು ಧಾರ್ಮಿಕ ಮೌಢ್ಯಗಳ ಎಲ್ಲೆಯನ್ನು ಮೀರಿ ಬದುಕನ್ನು ನಿಶ್ಚಿಂತಗೊಳಿಸುವ ಪರಿಶುದ್ಧ ಮನಸ್ಸಿನ ಪಾರದರ್ಶಕ ಅಭಿವ್ಯಕ್ತಿಗಳಾಗಿವೆ. ಮಾನವ ಬದುಕಿನ ವಿವಿಧ ಕಾಲಘಟ್ಟಗಳಲ್ಲಿ ರೂಪುಗೊಂಡು ಈ ತತ್ತ್ವಪದಗಳು ಪರಂಪರಾನುಗತವಾಗಿ ಜ್ಞಾನ ಹಾಗು ವಿಸ್ತಾರವಾದ ಲೋಕಾನುಭವದಿಂದ ಮೂಡಿಬಂದಿವೆ.

***"ಅನ್ನ ಉದುಕದ ಚಿಂತೆ***
***ಎಣ್ಣೆ ನೀರಿನ ಚಿಂತೆ***
***ಬಣ್ಣ ಬಳಿದಾಭರಣಕ್ಕೆ ತೊಡುವ ಚಿಂತೆ***
***ಮಣ್ಣುಮನಗಳ ಚಿಂತೆ***
***ಹೊನ್ನು ಹೆಣ್ಣಿನ ಚಿಂತೆ***
***... ... ... ... ... ... ... ... ... ... ...***
***ಅರಸುಗಳ ಭಯವಿದಕೆ***
***... ... ... ... ... ... ... ... ... ... ...***
***ಅರಿ ರೋಗಗಳ ಭಯವು***
***ಕಡು ಕಷ್ಟ ತನುವಿದಕೆ ಭಯವು ನೋಡಾ"***[14]

ಮುಪ್ಪಿನ ಷಡಕ್ಷರಿಗಳ ಈ ಮೇಲಿನ ತತ್ತ್ವಪದವು ಜೀವನ ಮೌಲ್ಯವನ್ನು ಸಾರುತ್ತದೆ. ಮನುಷ್ಯನ ತನ್ನ ಜೀವನದ ನಾನಾ ಬಗೆಯ ವ್ಯಾಮೋಹಗಳನ್ನು ತೊರೆದು ಬದುಕಬೇಕು ಆಸೆಯನ್ನು ಹತೋಟಿಯಲ್ಲಿಡದಿದ್ದರೆ ನೈತಿಕತೆಯಿಂದ ದೂರಾಗಬೇಕಾಗುತ್ತದೆ. ಒಂದೊಂದು ಆಸೆಯನ್ನು ಈಡೇರಿಸಲು ಪ್ರತಿ ಸಲ ಒಂದೊಂದು ಪ್ರಮಾದವನ್ನು ಮಾಡಬೇಕಾಗುತ್ತದೆ. ಯಾಕೆಂದರೆ ಮನಷ್ಯನ ಆಸೆಗಳಿಗೆ ಮಿತಿಯಿಲ್ಲ. ಅವು ಒಂದರ ನಂತರ ಮತ್ತೊಂದು ಆಕ್ರಮಿಸಿಕೊಳ್ಳುತ್ತಲೇ ಇರುತ್ತದೆ. ಇವು ನಮ್ಮನ್ನು ಸಾಧನೆಯ ಮಾರ್ಗದಲ್ಲಿ ಸಾಗಲು ಬಿಡುವುದಿಲ್ಲ. ಆದ್ದರಿಂದಲೇ ಈ ರೀತಿ ಚಿಂತೆಯಲ್ಲಿ ಮುಳುಗದೆ ಗುರುಮಾರ್ಗದಲ್ಲಿ ನಡೆದರೆ ಸುಖ ತಾನಾಗಿಯೇ ಒದಗಿಬರುತ್ತದೆ ಎಂದು ಷಡಕ್ಷರಿಗಳು ಪ್ರತಿಪಾದಿಸಿದ್ದಾರೆ.

ತತ್ತ್ವಪದಕಾರರಲ್ಲಿ ಗುರುವಿಗೆ ಮಹತ್ವದ ಸ್ಥಾನವಿದೆ. ಇಲ್ಲಿ ಗುರುವೇ ಸರ್ವಸ್ವ. ಸರ್ವ ಸಾಧನೆಗೆ ಸನ್ಮಾರ್ಗ ತೋರಲು ಗುರುವು ಇರಲೇ ಬೇಕು. ಗುರುವಿಲ್ಲದೆ ಸಾಧನೆಯ ಮಾರ್ಗ ಪೂರ್ಣಗೊಳ್ಳುವುದೇ ಇಲ್ಲ. ಗುರುವೇ ಶಿವ ಸ್ವರೂಪಿಯಾದವನು. ಇಂತಹ ಗುರುವು ಅರಿವಿನ ಮೂರ್ತ ರೂಪವಾಗಿ ಶಿಷ್ಯರಿಗೆ ಕಾಣಿಸುತ್ತಾನೆ. ಆದ್ದರಿಂದಲೇ ಶಿಷ್ಯರಾದವರು ತಮ್ಮ ಗುರುವಿನ ಮಹತಿಯನ್ನು ಹಾಡಿ ಹೊಗಳಿದ್ದಾರೆ. ಇಂತಹ ಅನೇಕ ತತ್ತ್ವಪದಗಳು ಚಾಮರಾಜನಗರ ಜಿಲ್ಲೆಯ ಎಲ್ಲಾ ಕಡೆಗಳಲ್ಲಿಯೂ ದೊರಕುತ್ತವೆ.

***"ಬಿಡದ್ಯೆ ದುಃಖ ಬಿಡದಯೆಂದಿಗೂ***
***ಬಿಡದ್ಯೆ ದುಃಖ ಬಿಡದ್ಯೆ***
***ಕಡೆಯ ಕಾಣದ ಕರ್ಮದೊಡಲಿದು ತಾನಾಗಿ***
***ಮಡದಿ ಮಕ್ಕಳನ್ನು ಬಿಟ್ಟು ಅಡವಿಗೆ ಹೋದರು।***
***… … … … … … … … … … …***
***ದೇಹವೇನಾನೆಂಬ ಮೋಹವನರಿಯದೆ***
***ಆಹಾರ ಬಿಟ್ಟು ಸಾಹಸಿಯಾದರೂ ಬಿಡದ್ಯೆ***
***ಮರಣ ಭೀತಿಯೂ ಹೋಗಿ ಪರಮನೆ ತಾನಾಗಿ***
***ಗುರುಲಿಂಗೇಶನೊಳು ಬೆರೆದೇಕನಾಗದೆ"***[5]

ಗುರುವಿನಲ್ಲಿ ನಿಜಭಕ್ತಿಯಿರದಿದ್ದರೆ ಏನನ್ನು ಸಾಧಿಸಲು ಸಾಧ್ಯವಿಲ್ಲ. ಎಷ್ಟೇ ಜಪತಪ ಮಾಡಿದರೂ ಗುರು ಕಾರುಣ್ಯ ದೊರಕದಿದ್ದರೆ ಅದು ವ್ಯರ್ಥ್ಯವೆಂದು ಮೇಲಿನ ಪದವು ಬೋಧಿಸುತ್ತದೆ. ದೇಹದ ಮೇಲಿನ ಆಸೆಯನ್ನು ಬಿಡದೆ, ಆಹಾರ ನಿದ್ರೆಯನ್ನು ತೊರೆದರು ಗುರುಕೃಪೆ ದೊರಕದಿದ್ದಾಗ ದುಃಖವು ಬಾಧಿಸದೇ ಬಿಡುವುದಿಲ್ಲ. ಜೀವನ ಸುಖಕರವಾಗಿರಬೇಕಾದರೆ, ಮುಕ್ತಿ ಹಾದಿ ಸುಲಭವಾಗಬೇಕಾದರೆ ಗುರುವಿನ ಆಶೀರ್ವಾದ ಬಹುಳ ಮೂಲ್ಯ ಎಂಬುದು ಈ ತತ್ತ್ವಪದದ ಆಶಯವಾಗಿದೆ.

ಚಾಮರಾಜನಗರ ಜಿಲ್ಲೆಯಲ್ಲಿ ದೊರಕುವ ತತ್ತ್ವಪದಗಳಲ್ಲಿ ಪ್ರಧಾನವಾಗಿ ಗುರುತಿಸಬಹುದಾದ ಅಂಶವೆಂದರೆ; ಇಲ್ಲಿನ ತತ್ತ್ವಪದಕಾರರು ಯಾವುದೇ ಒಂದು ಧರ್ಮಕ್ಕೆ ಜೋತು ಬೀಳಲಿಲ್ಲ. ಅಲ್ಲದೇ ಏಕದೇವೋಪಾಸನೆಗೆ ಅಂಟಿಕೊಳ್ಳದೆ ಬಹುದೇವೋಪಾಸನೆಯ ನೆಲೆಗಳನ್ನು ಪ್ರತಿಪಾದಿಸಿರುವುದು ಕಂಡುಬರುತ್ತದೆ. ಇಲ್ಲಿನ ತತ್ತ್ವಪದಕಾರರು ಮತ್ತು ಗುರುಪಂಥದಲ್ಲಿ ಗುರುತಿಸಿಕೊಂಡಿರುವ ಎಲ್ಲಾ ಜನರು ಅಂತರಂಗದಲ್ಲಿಯೇ ದೇವರನ್ನು ಕಾಣಲು ಪ್ರಯತ್ನಿಸಿದ್ದಾರೆ. ತಮ್ಮ ಸೀಮಿತವಾದ ಕಾರ್ಯಕ್ಷೇತ್ರದಲ್ಲಿ ಸಂಚಾರ ಮಾಡುತ್ತಾ, ಆಧ್ಯಾತ್ಮ ಸಾಧನೆ ಮಾಡಿದ್ದಾರೆ. ಜನ ಸುಖ–ದುಃಖಗಳಿಗೆ ಸ್ಪಂದಿಸಿದ್ದಾರೆ. ಸಾಂಸ್ಥಿಕವಾಗಿ ಒಂದು ದೇಗುಲ, ಒಂದು ಮತಕ್ಕೆ ಅಂಟಿಕೊಳ್ಳದೆ ಜಂಗಮ ಸ್ವರೂಪಿಯಾಗಿ ತಿರುಗಾಡಿ ತಮ್ಮ ಶಿಷ್ಯ ಪರಂಪರೆಯನ್ನು ಬೆಳೆಸಿದ್ದಾರೆ. ಸಮಾಜದ ಅನಿಷ್ಟ ಪದ್ಧತಿಗಳನ್ನು, ಮೌಢ್ಯಾಚರಣೆಗಳನ್ನು ನಿರ್ದಾಕ್ಷಿಣ್ಯವಾಗಿ ಖಂಡಿಸಿದ್ದಾರೆ. ಇವುಗಳು ಪುನರಾವರ್ತನೆಗೊಂಡಾಗ ಅವಾಚ್ಯ ಶಬ್ಧಗಳಿಂದಲೂ ನಿಂದಿಸಿದ್ದಾರೆ. ಈ ಮೂಲಕ ಸಾಂಸ್ಥಿಕ ಧರ್ಮದ ಜಡತ್ವ, ಯಜಮಾನಿ ಸಂಸ್ಕೃತಿ ಇತ್ಯಾದಿಗಳನ್ನು ತಿರಸ್ಕರಿಸಿ ಜನಸಾಮಾನ್ಯರ ನಡುವೆ ಬಾಳಿ ಬದುಕಿದ್ದಾರೆ. ಆ ಮೂಲಕ ದೈವತ್ವದ ನೆಲೆಗೇರಿದ್ದಾರೆ.

ವಚನಕಾರರಂತೆಯೇ ತತ್ತ್ವಪದಕಾರು ತಮ್ಮ ಅನೇಕ ತತ್ತ್ವಪದಗಳಲ್ಲಿ ಕಾಯಕ ಮಹತ್ವವನ್ನು ಸಾರಿದ್ದಾರೆ. ಕಾಯಕವಿಲ್ಲದೇ ಬದುಕಬಾರದು. ಎಲ್ಲಾ ಕಾಯಕಗಳೂ ಪವಿತ್ರವಾದವು ಎಂದು ತಿಳಿಸಿದ್ದಾರೆ. ಪ್ರಾಮಾಣಿಕತೆ, ಇನ್ನೊಬ್ಬರ ದುಃಖದಲ್ಲಿ ಭಾಗಿಯಾಗುವಿಕೆ ಸಾಮಾನ್ಯ ವ್ಯವಹಾರ ಜ್ಞಾನ, ವೇಳೆಯ ಮಹತ್ವ, ಪರನಾರಿ ಸೋದರತನ, ಎಲ್ಲರೂ ಒಂದೇ ಎಂಬ ಮನೋಭಾವ ಮುಂತಾದ ಉತ್ತಮ ಸಮಾಜವನ್ನು ಕಾಪಾಡುವ ಗುಣಗಳನ್ನು ಇವರು ಜನರಿಗೆ ಬೋಧಿಸಿದ್ದಾರೆ.

ಚಾಮರಾಜನಗರ ಜಿಲ್ಲೆಯಲ್ಲಿ ದೊರಕುವ ಹಲವಾರು ತತ್ತ್ವಪದಗಳು ಜನಾಕರ್ಷಣೆಯ ಸಾಹಿತ್ಯವಾಗಿ ಬೆಳೆದು ಉಳಿದು ನಿಂತಿವೆ. ಇಲ್ಲಿನ ತತ್ತ್ವಪದಕಾರರು ಬಳಸಿರುವ ದೇಸಿ ಕಲಾಕೌಶಲ್ಯ, ಸ್ಥಳೀಯ ಭಾಷೆ, ಪ್ರತಿಮೆ, ಪ್ರಾಸ, ಉಪಮೆ, ರೂಪಕ ಮುಂತಾದವುಗಳು ಪರಿಣಾಮಕಾರಿಯಾಗಿ ಜನಾಕರ್ಷಣೆಗೊಂಡಿವೆ. ಮನಸ್ಸಿನ ಚಂಚಲತೆ, ಲೌಕಿಕ ಬದುಕಿನ ಬಗೆಗಿನ ಆಕರ್ಷಣೆ, ಅರಿಷಡ್ವರ್ಗಗಳಿಂದ ಉಂಟಾಗುವ ತೊಂದರೆ ಮುಂತಾದವುಗಳಿಂದ ತಪ್ಪಿಸಿಕೊಂಡು ವಿರಕ್ತಿಯನ್ನು ಹೊಂದುವುದರ ಕಡೆಗೆ ಗಮನಹರಿಸಿವೆ. ಈ ತೆರನಾದ ಸೆಳೆತದಿಂದ ಪಾರು ಮಾಡುವಂತೆ ಗುರುದೇವರಲ್ಲಿ ಪ್ರಾರ್ಥಿಸುವ ಮೂಲಕ

ತಮ್ಮ ಭಕ್ತಿಯನ್ನು ಪ್ರಕಟಿಸಿವೆ. ಅನುಭಾವ, ನೀತಿಬೋಧೆ, ಸದಾಚಾರಗಳ ಮಹತ್ವವನ್ನು ಸಾರಿವೆ. ಜಾತೀಯತೆ ಮತ್ತು ಅಸ್ಪೃಶ್ಯತೆ, ಅಂಧಶ್ರದ್ಧೆ ಮತ್ತು ಮೌಢ್ಯತೆಯ ವಿರುದ್ಧ ಜಾಗೃತಿ ಮೂಡಿಸಿವೆ.

***"ಜಾತಿ ಎಂಬ ಸೂತಕವನ್ನು ಬಿಟ್ಟು ಬಾಳಿರಿ***
***ನಮ್ಮ ನಾಡನಾದ ದೇವರೊಂದೇ ಜಾತಿ ಮಾಡಿದ***
***ಅವನ ಮಾತ ಮೀರಿ ಪಾತಾಳಕ್ಕೆ ಬೀಳ ಬೇಡಿರಿ***
***ಜಗದೊಳಗೆ ಬಾಳ ಬೇಡಿರಿ॥***
***... ... ... ... ... ... ... ... ... ... ...***
***... ... ... ... ... ... ... ... ... ... ..."***[16]

ಕೊಳ್ಳೇಗಾಲದ ಸಮೀಪವಿರುವ ಕುಣಗಳ್ಳಿಯಲ್ಲಿ ಬದುಕಿದ್ದ ಪ್ರಸಿದ್ಧ ತತ್ತ್ವಪದಕಾರ ಗುರುನಂಜಪ್ಪಸ್ವಾಮಿಯವರ ತತ್ತ್ವಪದವಿದು. ಸಮಾಜದಲ್ಲಿ ಅನೈತಿಕತೆಯಿಂದ ನಡೆದುಕೊಳ್ಳುವ ಜನರನ್ನು ವಿಡಂಬನೆ ಮಾಡುವ ಶೈಲಿಯಲ್ಲಿ ಈ ತತ್ತ್ವಪದ ರಚನೆಗೊಂಡಿದೆ. ಮೇಲು–ಕೀಳು ಎಂಬುದು ಜಾತಿಯಿಂದ ಅಥವಾ ಹುಟ್ಟಿನಿಂದ ಬರುವಂತದ್ದಲ್ಲ. ವ್ಯಕ್ತಿಯು ಸಮಾಜದಲ್ಲಿ ನಡೆದುಕೊಳ್ಳುವ ರೀತಿಯಿಂದ ಶ್ರೇಷ್ಠ ಕನಿಷ್ಠ ಎಂಬುದು ನಿರ್ಧಾರವಾಗಬೇಕು ಎಂಬುದನ್ನು ಇಲ್ಲಿ ಮನಗಾಣಿಸಲಾಗಿದೆ.

ಹೀಗೆ ಚಾಮರಾಜನಗರ ಜಿಲ್ಲೆಯ ಬೇರೆ ಬೇರೆ ಪ್ರದೇಶಗಳಲ್ಲಿ ಅನೇಕ ತತ್ತ್ವಪದಕಾರರು ಜೀವಿಸಿದ್ದರೆಂಬುದಕ್ಕೆ ಸಾಕ್ಷಿಯಾಗಿ ಅವರ ತತ್ತ್ವಪದಗಳು ಇಂದಿಗೂ ದೊರಕುತ್ತವೆ. ಕೆಲವು ತತ್ತ್ವಪದಕಾರರು ಆಗಿ ಹೋಗಿದ್ದರೂ ಕೂಡ, ಅವರ ಬಗೆಗಿನ ಯಾವುದೇ ಸ್ಪಷ್ಟವಾದ ಮಾಹಿತಿಗಳು ಸಿಗದಿರುವುದು ವಿಷಾಧಕರ ಸಂಗತಿ. ಯಳಂದೂರು, ಕೊಳ್ಳೇಗಾಲ, ಚಾಮರಾಜನಗರ, ಮುಂತಾದ ಭಾಗಗಳಲ್ಲಿ 'ಗುರುಪೇರ್ಶಿಂಗ ಮೂರ್ತಿ' ಎಂಬ ಅಂಕಿತದೊಂದಿಗೆ ಹಲವಾರು ತತ್ತ್ವಗಳು ದೊರಕುತ್ತವೆ. ಯಳಂದೂರು ತಾಲ್ಲೂಕು ಅಂಬಳೆ ಗ್ರಾಮದಲ್ಲಿ ವಾಸವಾಗಿದ್ದ ಶ್ರೀಸಿದ್ದಯ್ಯ (ಕರುಗಪ್ಪ ಸ್ವಾಮಿಗಳು) ಮತ್ತು ಕುಣಗಳ್ಳಿಯಲ್ಲಿ ವಾಸವಿದ್ದ ಗುರುನಂಜಪ್ಪ ಸ್ವಾಮಿಗಳು ರಚಿಸಿದ್ದ ಅನೇಕ ತತ್ತ್ವಪದಗಳು ಇಂದಿಗೂ ಚಾಮರಾಜನಗರದ ಸುತ್ತಮುತ್ತ ಹಾಡಲ್ಪಡುತ್ತವೆ. ಹಿರಿಯ ತತ್ತ್ವಪದಕಾರರ ಹಾಗೆ ಜಾತೀಯತೆ ಮೌಢ್ಯವನ್ನು ಪ್ರಧಾನವಾಗಿ ಇವರ ಪದಗಳಲ್ಲಿ ವಿರೋಧಿಸಲಾಗಿದೆ. ಹಾಗೆಯೇ ಉತ್ತರ ಕರ್ನಾಟಕದ ತತ್ತ್ವಪದಕಾರರಾದ ಶಿಶುನಾಳ ಷರೀಫರಾದಿಯಾಗಿ ಅನೇಕರ ತತ್ತ್ವಪದಗಳು ಚಾಮರಾಜನಗರದ ನೆಲಕ್ಕೆ ಒಗ್ಗಿಕೊಂಡು ಅಲ್ಪ–ಸ್ವಲ್ಪ ಬದಲಾವಣೆಯೊಂದಿಗೆ ಪ್ರಚಲಿತದಲ್ಲಿವೆ. ರೂಪಾಂತರಗೊಂಡಿವೆ. ಇವುಗಳು ಸಾಮಾಜಿಕ, ಆಧ್ಯಾತ್ಮಿಕ ಮತ್ತು ಆಚರಣಾತ್ಮಕ ನೆಲೆಗಳಲ್ಲಿ ಇಂದಿಗೂ ಈ ನೆಲದಲ್ಲಿ ನೆಲೆಗೊಂಡಿವೆ.

ಉತ್ತರ ಕರ್ನಾಟಕದಲ್ಲಿ ರಚನೆಯಾದ ತತ್ತ್ವಪದಗಳಷ್ಟು ಚಾಮರಾಜನಗರ ಜಿಲ್ಲೆಯಲ್ಲಿ ರಚನೆಯಾಗಿಲ್ಲ. ಅದಕ್ಕೆ ಪರಿಸರ ಮತ್ತು ಕಾಲವೂ ಕಾರಣವಿರಬಹುದು. ವಚನಕಾರರಲ್ಲಿ ಹೆಚ್ಚು ಜನ ಉತ್ತರ ಕರ್ನಾಟಕದಲ್ಲಿ ಜನಿಸಿದ್ದರಿಂದ ಇವರ ಪ್ರಭಾವ ಆ ನೆಲಕ್ಕೆ ಹೆಚ್ಚಾಗಿದೆ. ಇದು ತತ್ತ್ವಪದಗಳ ಸೃಷ್ಠಿಗೂ ಕಾರಣವಾಗಿರಬಹುದು. ಆದರೆ ಚಾಮರಾಜನಗರ ಜಿಲ್ಲೆಯಲ್ಲಿ ಕೆಲವೇ ತತ್ತ್ವಪದಕಾರರ ಮಾಹಿತಿ ದೊರೆತರೂ ಕನ್ನಡ ತತ್ತ್ವಪದಗಳನ್ನು ಮನೆ–ಮನಗಳಿಗೆ ತಲುಪಿಸುವ ಕಾಯಕದಲ್ಲಿ ಇಲ್ಲಿನ ಗುರುಮಠಗಳು ಮತ್ತು ತತ್ತ್ವಪದಗಾಯಕರು ನಿರತರಾಗಿದ್ದಾರೆ. ಇವರು ಹಾಡುವ ಹಾಡುಗಳಲ್ಲಿ ನೀತಿ ಇದೆ, ವ್ಯಂಗ್ಯವಿದೆ, ಬೆಡಗಿದೆ, ಸ್ತುತಿಯಿದೆ, ಆತ್ಮನಿವೇದನೆಯಿದೆ, ವೈರಾಗ್ಯವಿದೆ, ಲಾಲಿತ್ಯವಿದೆ, ಮೊನಚಿದೆ, ನಾಟ್ಯವಿದೆ, ಲಯಬದ್ಧತೆಯಿದೆ, ಮೋಹಕತೆ, ಭಾವ, ಬಂಧುರತೆಗಳಿವೆ.

ಇಂತಹ ಹಾಡುಗಳು ತತ್ತ್ವಪದ ಹಾಡುಗಾರರಿಂದಲೇ ಜನರ ಮನಸ್ಸಿನ ಕದವನ್ನು ತಟ್ಟುತ್ತವೆ. ಹೃದಯ ತಲುಪುತ್ತವೆ. ಇಂತಹ ಅನೇಕ ಗಾಯಕರು ಜಿಲ್ಲೆಯ ತುಂಬಾ ಕಾಣಸಿಗುತ್ತಾರೆ.

ಚಾಮರಾಜನಗರ ಜಿಲ್ಲೆಯ ಮತ್ತು ಇನ್ನಿತರ ಭಾಗಗಳಲ್ಲಿನ ತತ್ತ್ವಪದಕಾರರ ತತ್ತ್ವಪದಗಳು ಮೌಖಿಕವಾಗಿ ಪರಂಪರಾನುಗತವಾಗಿ ಉಳಿದು–ಬೆಳೆದು ಬರಲು ಇವರು ಕಾರಣರಾಗಿದ್ದಾರೆ. ತಮ್ಮದೇಯಾದ ಸಂಸ್ಕೃತಿಯೊಂದಿಗೆ, ಆಚಾರ–ವಿಚಾರಗಳೊಂದಿಗೆ ಬದುಕುತ್ತಿರುವ ಇವರಿಂದ ಸಾಹಿತ್ಯವಾಗಿ, ಸಂಗೀತಾತ್ಮಕವಾಗಿ ಸಾಂಸ್ಕೃತಿಕವಾಗಿ ಅಮೂಲ್ಯ ಸಂಪತ್ತಾದ ತತ್ತ್ವಪದಗಳನ್ನು ಸಂಗ್ರಹಿಸಿ ಸಂರಕ್ಷಿಸಬೇಕಾದುದು ನಮ್ಮೆಲ್ಲರ ಕರ್ತವ್ಯವಾಗಿದೆ. ಆ ಮೂಲಕ ಚಾಮರಾಜನಗರ ಜಿಲ್ಲೆಯ ತತ್ತ್ವಪದಕಾರರ ತತ್ತ್ವಪದಗಳು ಶಾಶ್ವತವಾಗಿ ಉಳಿಯುವಂತೆ ಮಾಡಬೇಕಾಗಿದೆ.

**ಕೊನೆ ಟಿಪ್ಪಣಿಗಳು**

1. ಶಿವಪ್ರಕಾಶ್, ಎಚ್.ಎಸ್. (1998). *ತತ್ತ್ವಪದಗಳು–ಪ್ರಸ್ತಾವನೆ–viii.* ಕರ್ನಾಟಕ ಸಾಹಿತ್ಯ ಅಕಾಡೆಮಿ.
2. ಆನಂದ ಮೂರ್ತಿ ಜಿ.ವಿ(ಸಂ.) (2000). *ಹಲವು ತೋಟದ ಹೂಗಳು–ಪ್ರಸ್ತಾವನೆ-vi.* ಕರ್ನಾಟಕದ ಯಕ್ಷಗಾನ ಮತ್ತು ಜಾನಪದ ಅಕಾಡೆಮಿ.
3. ನಾಗಭೂಷಣ ಶಾಸ್ತ್ರಿಗಳು (ಸಂ.) (1990). *ನಿಜಗುಣ ಶಿವಯೋಗಿಗಳ ಕೈವಲ್ಯ ಪದ್ಧತಿ.* ಪುಟ.35.
4. ಅದೇ, ಪುಟ. 65.
5. ಅದೇ, ಪುಟ. 102.
6. ಅದೇ, ಪುಟ. 36.
7. ಜಗದ್ಗುರು ಶ್ರೀಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು. (2011). *ಮುಪ್ಪಿನ ಷಡಕ್ಷರಿಗಳ ಕೈವಲ್ಯ ಪದಗಳು ಪ್ರಸ್ತಾವನೆ.* ಪುಟ. 13.
8. ಅದೇ, ಪುಟ. 04.
9. ಅದೇ, ಪುಟ. 61.
10. ಮಹದೇವ ಮೂರ್ತಿ, ಡಿ.ಎಂ.. (1999). *ಸ್ವರವಿಚಾರ ಸಂಕಿರಣ ಸಂಪುಟ.* ಪುಟ. 185.
11. ಅದೇ, ಪುಟ. 185.
12. ಅದೇ, ಪು–186.
13. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಯರಗಂಬಳ್ಳಿಯ ರಂಗಯ್ಯ ಮತ್ತು ತಂಡದವರು ಹಾಡಿದ ತತ್ತ್ವಪದ.
14. ಜಗದ್ಗುರು ಶ್ರೀಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು, ಮುಪ್ಪಿನ ಷಡಕ್ಷರಿಗಳ ಕೈವಲ್ಯ ಪದಗಳು ಪ್ರಸ್ತಾವನೆ, ಪು–12.
15. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಹೊನ್ನೂರಿನ ಕೂಸಯ್ಯ ಮತ್ತು ತಂಡದವರು ಹಾಡಿದ ತತ್ತ್ವಪದ.
16. ಕೊಳ್ಳೇಗಾಲ ತಾಲ್ಲೂಕು ಕುಣಗಳ್ಳಿ ಗ್ರಾಮದ ಗುರುನಂಜಪ್ಪಸ್ವಾಮಿ ಗುರುಮಂಡಳಿಯ ಗುರುಪುತ್ರರು ಹಾಡಿದ ತತ್ತ್ವಪದ.